# ಹಿಂದೂಸ್ಥಾನಿ ತಾಳವಾದ್ಯ ಜೂನಿಯರ್ ಲೆವಲ್

## ಪರಿವಿಡಿ ಮೂರನೆ ವರ್ಷ

## ಪ್ರಾಯೋಗಿಕ ಮತ್ತು ಶಾಸ್ತ್ರ ( Theory ) ಪಠ್ಯಕ್ರಮ


| ಕ್ರ. ಸಂಖ್ಯೆ ಅಧ್ಯಾಯಗಳು | ಪುಟ ಸಂಖ್ಯೆ |
| --- | --- |
| ೧] ತಬಲಾದ ತೃತೀಯ ಅಕ್ಷರಗಳು .[ ಬೋಲ್ ] | ೩ |
| ೨] ಧೀಪಚಂದಿ ಪರಿಚಯ ಹಾಗೂ ೪ ಬದಲ್ ಠೇಕಾಗಳು. | ೪-೬ |
| ೩] ದೃತ್ ಏಕ್ ತಾಳದ ಪರಿಚಯ ಹಾಗೂ ೪ ಬದಲ್ ಠೇಕಾಗಳು | ೭-೯ |
| ೪] ಸ್ವರಗೀತೆ ಅಥವಾ ದೇವರನಾಮ ಹಾಡುತ್ತ ತಬಲ ನುಡಿಸುದನ್ನು ತಿಳಿದಿರಬೇಕು | ೧೦ |
| ೫] ತಬಲಾದ ದಶ ವರ್ಣಗಳು | ೧೧ |
| ೬] ಚೌತಾಲದ ಪರಿಚಯ ಹಾಗೂ ಠಾಯ [ ಮೂಲ ಲಯ ], ದುಗುನ್,ತಿಗುನ್, ಚೌಗುನ್ ಲಯಗಳಲ್ಲಿ ನುಡಿಸುವುದು. | ೧೨- ೧೩ |
| ೭] ಭಜನ್ ಠೇಕಾ ಪರಿಚಯ | ೧೪ |
| ೮] ದಾದ್ರ ತಾಳದ ೪ ತಿಹಾಯಿಗಳು. | ೧೫ |
| ೯] ಝಪ್ತಾಳದ ೪ ಕಾಯ್ದ ಪಲ್ಟಾಗಳು. | ೧೬ |
| ೧೦] ದೃತ್ ಏಕ್ ತಾಳದ ೪ ಮುಕಡಾಗಳು. | ೧೭ |
| ೧೧] ಝಪ್ತಾಳದ ೨ ತಿಹಾಯಿ. | |
| ೧೨] ಝಪ್ತಾಳದ ೨ ಮುಕಡಾಗಳು. | ೧೮ |
| ೧೩] ಝಪ್ತಾಳದ ೪ ಪೇಶ್ಕಾರ್. | ೧೯ |

## ಶಾಸ್ತ್ರ ಪರಿಚಯ ೨೦

## ಪಾರಿಭಾಷಿಕ ಶಬ್ದಗಳು

೧] ಕರ್ನಾಟಕೀಯ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತ ವ್ಯತ್ಯಾಸ ೨೧-೨೩

೨] ವಿಷ್ಣು ನಾರಯಣ್ ಭಾತ್ ಖಂಡೆ ಹಾಗೂ ವಿಷ್ಣು ದಿಗಂಬರ್ ಪಲುಸ್ಕರ್ ೨೪- ೨೫
ಲಿಪಿ ಪದ್ಧತಿ ಕುರಿತು ವಿವರಿಸಿ.

೩] ವಿಲಂಬಿತ್ ತೀನ್ ತಾಲ್ ಪರಿಚಯ ೨೬

೪] ವಿಲಂಬಿತ್ ಝುಪ್ತಾಲ್ ಪರಿಚಯ ೨೭

<u>ವಿಶೇಷವಾಗಿ ವಿದ್ಯಾರ್ಥಿಗಳ ಗಮನಕ್ಕೆ</u>

೧] ಸ್ವರಗೀತೆ ಅಥವಾ ದೇವರನಾಮ ಹಾಡುತ್ತ ತಬಲ ನುಡಿಸುದನ್ನು ತಿಳಿದಿರಬೇಕು

೨] ಹಾಡು ಅಥವಾ ಛೋಟಖ್ಯಾಲ್ ಜೊತೆ ತಬಲ ಸಾತ್ ಸಂಗತ್ ಮಾಡುವದನ್ನು ತಿಳಿದಿರಬೇಕು.

೩] ಹಾರ್ಮೋನಿಯಂ ಅಥವಾ ಬೇರೆ ವಾದ್ಯದ ಲೆಹರದ ಜೊತೆ ತಬಲ ಸೋಲೋ ನುಡಿಸಬೇಕು.

೪] ತಬಲ ಚಿತ್ರ ಬಿಡುಸುವದನ್ನ ಅಭ್ಯಾಸ ಮಾಡಬೇಕು.

## ೧] ತಬಲಾದ ಮೂರನೆ ಅಕ್ಷರಗಳು

೧. ಗಿಡನಗ  ಕಿಡನಗ  |

೨. ದಿನಗಿನ  ತಿನಕಿನ   |

೩. ತಿಟಕತ  ಗದಿಗನ   |

೪. ದಿಟದಿಟ  ತಿಟತಿಟ   |

೫. ಧಾಗೆತಿಟ  ತಾಕೆತಿಟ  |

೬. ತಕ್ಕಾಡನ್ ತಗ್ಗಾಡನ್ |

೭. ಧಾತಿ ಧಾತಿ  ತಾತಿ ತಾತಿ  |

೮. ಧೀಕ್ಡಧಿಂಧಾ  ತೀಕ್ಡತಿಂತಾ  |

೯. ಧಿರಧಿರ ಕಿಟತಕ  ತಿರತಿರ ಕಿಟತಕ  |

೧೦. ಧಾತಿಧಾಗೆ ದಿನಗಿನ ತಾತಿತಾಕೆ ತಿನಕಿನ |

೧೧. ಧಾತಿ ಧಾ -  ತಾತಿ ತಾ - |

೧೨. ಕಡಾ್ದತಿಟ ಕಡಾ್ದತಿಟ |

೧೩. ಧಾಕತ  ತಾಕತ  |

೧೪. ಕತಧಾ - ಕತಕತ ಧಾ - |

ಧೀಪಚಂದಿ ತಾಳದ ಪರಿಚಯ ಹಾಗೂ ೪ ಬದಲ್ ಠೇಕಾಗಳು

## ತಾಳ ಧೀಪಚಂದಿ

ಮಾತ್ರ - ೧೪

ಭಾಗ – ೪ [ ೩- ೪-೩-೪ ] ರಂತೆ

೧, ೪ , ೧೧ ನೇ ಮಾತ್ರದ ಮೇಲೆ ಪೆಟ್ಟು.

೮ ನೇ ಮಾತ್ರದ ಮೇಲೆ ಹುಸಿ.

೩ ಪೆಟ್ಟು , ೧ ಹುಸಿ.

ತಾಳಲಿಪಿ ಪದ್ಧತಿ

| | | | | | | | | | |
|---|---|---|---|---|---|---|---|---|---|
| ಮಾತ್ರ - | ೧ | ೨ | ೩ | \| | ೪ | ೫ | ೬ | ೭ | \| |
| ಠೇಕಾ - | ಧಾ | ಧಿ | - | \| | ಧಾ | ಧಾ | ಧಿ | - | \| |
| ಚಿಹ್ನೆ - | x | | | \| | ೨ | | | | \| |
| ಮಾತ್ರ - | ೮ | ೯ | ೧೦ | \| | ೧೧ | ೧೨ | ೧೩ | ೧೪ | \| |
| ಠೇಕಾ - | ತಾ | ತಿ | - | \| | ಧಾ | ಧಾ | ಧಿ | - | \| |
| ಚಿಹ್ನೆ - | ೦ | | | \| | ೩ | | | | \| |

ಈ ತಾಳವನ್ನು ಠುಮ್ರಿ ಗಾಯನಕ್ಕೆ, ಸುಗಮ ಸಂಗೀತಕ್ಕೆ ,ಜಾನಪದ ಸಂಗೀತಕ್ಕೆ ಹಾಗೂ ಸಿನಿಮಾ ಸಂಗೀತಕ್ಕೆ ಉಪಯೋಗಿಸುತ್ತಾರೆ.

ಇದು ಮಿಶ್ರಜಾತಿಯ [ ಏಳು ಮಾತ್ರ ] ತಾಳವಾಗಿದೆ.

## ಧೀಪಚಂದಿಯ ಬದಲ್ ಠೇಕಾಗಳು

### ಪ್ರಕಾರ – ೧

| | | | | | | | | |
|---|---|---|---|---|---|---|---|---|
| ೧ | ೨ | ೩ | \| | ೪ | ೫ | ೬ | ೭ | \| |
| ಧಾ | ತಿಟ | - | \| | ಧಾ | ಧಾ | ತಿಟ | - | \| |
| x | | | \| | ೨ | | | | \| |
| ೮ | ೯ | ೧೦ | \| | ೧೧ | ೧೨ | ೧೩ | ೧೪ | \| |
| ತಾ | ತಿಟ | - | \| | ಧಾ | ಧಾ | ತಿಟ | - | \| |
| ೦ | | | \| | ೩ | | | | \| |

### ಪ್ರಕಾರ – ೨

| | | | | | | | | |
|---|---|---|---|---|---|---|---|---|
| ೧ | ೨ | ೩ | \| | ೪ | ೫ | ೬ | ೭ | \| |
| ಧಾ | ತಿರ | ಕಿಟ | \| | ಧಾ | ಧಾ | ತಿರ | ಕಿಟ | \| |
| x | | | \| | ೨ | | | | \| |
| ೮ | ೯ | ೧೦ | \| | ೧೧ | ೧೨ | ೧೩ | ೧೪ | \| |
| ತಾ | ತಿರ | ಕಿಟ | \| | ಧಾ | ಧಾ | ತಿರ | ಕಿಟ | \| |
| ೦ | | | \| | ೩ | | | | \| |

## ಪ್ರಕಾರ – ೩

| | | | | | | |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ಧಾ | ಧಾ | ತಿ | ಧಾ | ಧಾ | ಧಾ | ತಿ |
| x | | | ೨ | | | |
| ೮ | ೯ | ೧೦ | ೧೧ | ೧೨ | ೧೩ | ೧೪ |
| ತಾ | ತಾ | ತಿ | ಧಾ | ಧಾ | ಧಾ | ತಿ |
| ೦ | | | ೩ | | | |

## ಪ್ರಕಾರ – ೪

| | | | | | | |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ಧಾ | ದಿನ | ಗಿನ | ಧಾ | ಧಾ | ದಿನ | ಗಿನ |
| x | | | ೨ | | | |
| ೮ | ೯ | ೧೦ | ೧೧ | ೧೨ | ೧೩ | ೧೪ |
| ತಾ | ತಿನ | ಕಿನ | ಧಾ | ಧಾ | ದಿನ | ಗಿನ |
| ೦ | | | ೩ | | | |

## ತಾಳ ದೃತ್ ಏಕ್ ತಾಳ ಪರಿಚಯ ಹಾಗೂ ೪ ಬದಲ್ ಠೇಕಾಗಳು

## ತಾಳ  ದೃತ್ ಏಕ್ ತಾಳ

ಮಾತ್ರ – ೧೨

ಭಾಗ – ೬  [೨- ೨- ೨- ೨- ೨- ೨ ] ರಂತೆ

೧ ನೇ ಮಾತ್ರದ ಮೇಲೆ ಸಮ್.

೧, ೫, ೯, ೧೧ ನೇ ಮಾತ್ರದ ಮೇಲೆ  ಪೆಟ್ಟು .

೩, ೭ ನೇ ಮಾತ್ರದ ಮೇಲೆ ಹುಸಿ.

ಪೆಟ್ಟು – ೪.

ಹುಸಿ - ೨.

ತಾಳಲಿಪಿ ಪದ್ಧತಿ

| | | | | | | | | |
|---|---|---|---|---|---|---|---|---|
| ೧ | ೨ | \| | ೩ | ೪ | \| | ೫ | ೬ | \| |
| ಧಿನ್ | ಧಿನ್ | \| | ಧಾ | ತಿಟ | \| | ತೊ | ನ | \| |
| x | | \| | ೦ | | \| | ೨ | | \| |
| ೭ | ೮ | \| | ೯ | ೧೦ | \| | ೧೧ | ೧೨ | \| |
| ಕ | ತಿನ್ | \| | ಧಾಗೆ | ತಿಟ | \| | ಧಿ | ನಾ | \| |
| ೦ | | \| | ೩ | | \| | ೪ | | \| |

ಈ ತಾಳವನ್ನು ವಿಲಂಬಿತ್ ಲಯದಲ್ಲಿ ಬಡಾಖ್ಯಾಲ್ ಹಾಗೂ ದ್ರುತ್ ಲಯದಲ್ಲಿ ಛೋಟಾಖ್ಯಾಲ್ ಗಾಯನಕ್ಕೆ ಉಪಯೋಗಿಸುತ್ತಾರೆ.

## ದೃತ್ ಏಕ್ ತಾಳದ ೪ ಬದಲ್ ಠೇಕಾಗಳು

### ಪ್ರಕಾರ – ೧

| | | | | | | | | |
|---|---|---|---|---|---|---|---|---|
| ೧ | ೨ | \| | ೩ | ೪ | \| | ೫ | ೬ | \| |
| ಧಿನ್ | ಧಿನ್ | \| | ಧಾ | ತಿಟ | \| | ತೊ | ನನ | \| |
| x | | \| | ೦ | | \| | ೨ | | \| |
| ೭ | ೮ | \| | ೯ | ೧೦ | \| | ೧೧ | ೧೨ | \| |
| ಕ | ತಿನ್ | \| | ಧಾಗೆ | ತಿಟ | \| | ಧಿ | ನನ | \| |
| ೦ | | \| | ೩ | | \| | ೪ | | \| |

### ಪ್ರಕಾರ - ೨

| | | | | | | | | |
|---|---|---|---|---|---|---|---|---|
| ೧ | ೨ | \| | ೩ | ೪ | \| | ೫ | ೬ | \| |
| ಧಿನ್ | ಧಿನ್ | \| | ಧಾ | ತಿರಕಿಟ | \| | ತೊ | ನ | \| |
| x | | \| | ೦ | | \| | ೨ | | \| |
| ೭ | ೮ | \| | ೯ | ೧೦ | \| | ೧೧ | ೧೨ | \| |
| ಕ | ತಿನ್ | \| | ಧಾಗೆ | ತಿರಕಿಟ | \| | ಧಿ | ನಾ | \| |
| ೦ | | \| | ೩ | | \| | ೪ | | \| |

## ಪ್ರಕಾರ – ೩

| | | | | | |
|---|---|---|---|---|---|
| ೧ | ೨ | ೩ | ೪ | ೫ | ೬ |
| ಧಿನ್ | ಧಿನ್ | ಧಾ | ತಿರಕಿಟ | ತಿನ | ಕಿನ |
| x | | ೦ | | ೨ | |
| ೭ | ೮ | ೯ | ೧೦ | ೧೧ | ೧೨ |
| ಕ | ತಿನ್ | ಧಾಗೆ | ತಿರಕಿಟ | ಧಿನ | ಗಿನ |
| ೦ | | ೩ | | ೪ | |

## ಪ್ರಕಾರ – ೪

| | | | | | |
|---|---|---|---|---|---|
| ೧ | ೨ | ೩ | ೪ | ೫ | ೬ |
| ಧಿನ್ | ಧಿನ್ | ಧಧ | ತಿಟ | ತಿನ | ಕಿನ |
| x | | ೦ | | ೨ | |
| ೭ | ೮ | ೯ | ೧೦ | ೧೧ | ೧೨ |
| ಕ | ತಿನ್ | ಧಧ | ತಿಟ | ಧಿನ | ಗಿನ |
| ೦ | | ೩ | | ೪ | |

**ಈ ಬದಲ್ ಠೇಕಾಗಳನ್ನು ಚೀಜ್ ಹಾಡುವಾಗ ಮಧ್ಯದಲ್ಲಿ ಕೌಶಲ್ಯದಿಂದ , ತಯಾರಿಯಾಗಿ, ಸುಂದರವಾಗಿ ನುಡಿಸುತ್ತಾರೆ.**

# ಸ್ವರ ಗೀತೆ

**ಭೂಪ್ ರಾಗ** **ತಾಳ : ತೀನ್ ತಾಳ**

**ಸ್ಥಾಯಿ**

ಸ ಸ ದ ಪ | ಗ ರೆ ಸ ರೆ |

ಗ - ಪ ಗ | ದ ಪ ಗ - |

**ಅಂತರಾ**

ಗ ಪ ದ ಸ | ರೆ ಸ ದ ಪ |

ಸ ಪ ದ ಪ | ಗ ರೆ ಸ - |

# ಬಸವಣ್ಣನವರ ವಚನ

**ರಾಗ : ಖಂಬಾವತಿ** **ತಾಳ : ದಾದ್ರ**

**ಸ್ಥಾಯಿ**

ತಂದೆ ನೀನು ತಾಯಿ ನೀನು

ಬಂಧು ನೀನು ಬಳಗ ನೀನು

**ಅಂತರಾ**

ನೀನಲ್ಲದೆ ಮತ್ತಾರಯ್ಯ

ಕೂಡಲಸಂಗಮದೇವ

ಹಾಲಲದ್ದು ನೀರಲದ್ದು

## ತಬಲಾದ ದಶ ವರ್ಣಗಳು ( ದಶ - ೧೦ )

**ತಾ ,ನ ,ತಿನ್, ತಿ, ರ , ಟ,( ತಕ್ ) ಕ, ( ಕತ್) ಗೆ, ಧಾ, ಧಿನ್**

**೧.ತಬಲದ ಮೇಲೆ ನುಡಿಸುವಂತ ವರ್ಣಗಳು - ೬**

**ತಾ , ನ , ತಿನ್, ತಿ, ರ , ಟ**

**೨.ಡಗ್ಗಾದ ಮೇಲೆ ನುಡಿಸುವಂತ ವರ್ಣಗಳು – ೨**

**ಕ, ಮತ್ತು ಗೆ**

**೩.ತಬಲ ಮತ್ತು ಡಗ್ಗಾ ಎರಡರ ಮೇಲೆ ನುಡಿಸುವಂತ ವರ್ಣಗಳು - ೨**

**ಧಾ ಮತ್ತು ಧಿನ್**

## ತಾಳ ಚೌತಾಳ ಪರಿಚಯ

ಮಾತ್ರ - ೧೨

ಭಾಗ – ೬ [೨- ೨- ೨- ೨- ೨- ೨ ] ರಂತೆ

೧ ನೇ ಮಾತ್ರದ ಮೇಲೆ ಸಮ್.

೧, ೫, ೯, ೧೧ ನೇ ಮಾತ್ರದ ಮೇಲೆ ಪೆಟ್ಟು .

೩, ೭ ನೇ ಮಾತ್ರದ ಮೇಲೆ ಹುಸಿ.

ಪೆಟ್ಟು – ೪.

ಹುಸಿ - ೨.

ತಾಳಲಿಪಿ ಪದ್ಧತಿ

| | | | | | | | | |
|---|---|---|---|---|---|---|---|---|
| ೧ | ೨ | \| | ೩ | ೪ | \| | ೫ | ೬ | \| |
| ಧಾ | ಧಾ | \| | ಧಿಂ | ತಾ | \| | <u>ತಿಟ</u> | ಧಾ | \| |
| x | | \| | ೦ | | \| | ೨ | | \| |
| ೭ | ೮ | \| | ೯ | ೧೦ | \| | ೧೧ | ೧೨ | \| |
| ಧಿಂ | ತಾ | \| | <u>ತಿಟ</u> | <u>ಕತ</u> | \| | <u>ಗದಿ</u> | <u>ಗನ</u> | \| |
| ೦ | | \| | ೩ | | \| | ೪ | | \| |

ಈ ತಾಳವನ್ನು ದ್ರುಪದ್ ಗಾಯನ ಶೈಲಿಗೆ ಉಪಯೋಗಿಸುತ್ತಾರೆ. ಇದು ಖುಲ್ಲಾ ಬಾಜ್ ನಿಂದ [ ಒಪನ್ ] ನುಡಿಸುತ್ತಾರೆ.

ಚೌತಾಳವನ್ನು ವಿಲಂಬಿತ್ ಲಯ, ದುಗನ್ ಲಯ, ತಿಗುನ್ ಲಯ, ಚೌಗುನ್ ಲಯದಲ್ಲಿ ನುಡಿಸುವುದು ಹಾಗೂ ಬರೆಯುವ ಪದ್ಧತಿ.

## ದುಗನ್ ಲಯ

೧ ೨ | ೩ ೪ | ೫ ೬ |

ಧಾಧಾ ಧಿಂತಾ | ತಿಟಧಾ ಧಿಂತಾ| ತಿಟಕತ ಗದಿಗನ|

x | ೦ | ೨ |

೭ ೮ | ೯ ೧೦ | ೧೧ ೧೨ |

ಧಾಧಾ ಧಿಂತಾ | ತಿಟಧಾ ಧಿಂತಾ| ತಿಟಕತ ಗದಿಗನ|

೦ | ೩ | ೪ |

## ತಿಗುನ್ ಲಯ

೧ ೨ ೩ ೪ ೫ ೬

ಧಾಧಾಧಿಂ ತಾತಿಟಧಾ | ಧಿಂತಾತಿಟ | ಕತಗದಿಗನ | ಧಾಧಾಧಿಂ | ತಾತಿಟಧಾ |

೭ ೮ ೯ ೧೦ ೧೧ ೧೨

ಧಿಂತಾತಿಟ ಕತಗದಿಗನ | ಧಾಧಾಧಿಂ ತಾತಿಟಧಾ | ಧಿಂತಾತಿಟ ಕತಗದಿಗನ |

## ಚೌಗುನ್ ಲಯ

೧ ೨ ೩ ೪ ೫ ೬

ಧಾಧಾಧಿಂತಾ ತಿಟಧಾಧಿಂತಾ |ತಿಟಕತಗದಿಗನ ಧಾಧಾಧಿಂತಾ| ತಿಟಧಾಧಿಂತಾ ತಿಟಕತಗದಿಗನ |

೭ ೮ ೯ ೧೦ ೧೧ ೧೨

ಧಾಧಾಧಿಂತಾ ತಿಟಧಾಧಿಂತಾ |ತಿಟಕತಗದಿಗನ ಧಾಧಾಧಿಂತಾ |ತಿಟಧಾಧಿಂತಾ ತಿಟಕತಗದಿಗನ |

## ತಾಳ: ಭಜನ್ ಠೇಕ

ಮಾತ್ರ : ೮

ಭಾಗ : ೨ ( ೪,೪ ) ರಂತೆ

ಪೆಟ್ಟು : ೧

೧ ನೇ ಮಾತ್ರದ ಮೇಲೆ ಸಮ್

ಹುಸಿ : ೧

೫ ನೇ ಮಾತ್ರದ ಮೇಲೆ ಹುಸಿ

| | | | | | | | | | |
|---|---|---|---|---|---|---|---|---|---|
| ೧ | ೨ | ೩ | ೪ | \| | ೫ | ೬ | ೭ | ೮ | \| |
| ಧಿ | ನಧಿ | ಧಿ | ನ | \| | ಧಿ | ನತಿ | ತಿ | ನ | \| |
| x | | | | \| | O | | | | \| |

ಈ ತಾಳವನ್ನು ಲಘು ಸಂಗೀತಕ್ಕೆ ಉಪಯೋಗಿಸುತ್ತಾರೆ.

( ಹೆಚ್ಚು ಕಭೀರ್ ಭಜನ್ , ಮಿರಭಾಯಿ ಭಜನ್, ಮತ್ತು ದಾಸರ ಪದ, ವಚನಗಳಿಗೆ ಉಪಯೋಗಿಉತ್ತಾರೆ )

## ದಾದ್ರ ತಾಳದ ೪ ತಿಹಾಯಿಗಳು

**ತಿಹಾಯಿ -೧**

**ಧಿನ್- ತಾ - ಧಿನ್- ತಾ - ಧಿನ್- ತಾ -**

**ಧಾ .....**

**x**

**ತಿಹಾಯಿ – ೨**

**ಧಿನ್ ಧಿನ್ ತಾ - ಧಿನ್ ಧಿನ್ ತಾ - ಧಿನ್ ಧಿನ್ ತಾ -**

**ಧಾ .....**

**x**

**ತಿಹಾಯಿ – ೩**

**ತಿರಕಿಟ ಧಾ- ತಿರಕಿಟ ಧಾ- ತಿರಕಿಟ ಧಾ-**

**ಧಾ....**

**x**

**ತಿಹಾಯಿ – ೪**

**ಧಾಧಾ ಧಾತಿ ಧಾಧಾ ಧಾತಿ ಧಾಧಾ ಧಾತಿ**

**ಧಾ....**

**x**

## ಝಪ್ತಾಳದ ಕಾಯ್ದಾ ೪ ಪಲ್ಟಾಗಳು

ಪಲ್ಟಾ - ೧ [ ಪ್ರಕಾರ ]

ಧಾಗೆತಿಟ ದಿನಗಿನ | ಧಾತಿರಕಿಟತಕ ಧಾಗೆತಿಟ ತಿನಕಿನ |
ತಾಕೆತಿಟ ತಿನಕಿನ | ಧಾತಿರಕಿಟತಕ ಧಾಗೆತಿಟ ದಿನಗಿನ |

ಪಲ್ಟಾ - ೨ [ ಪ್ರಕಾರ ]

ಧಾಗೆತಿಟ ದಿನಗಿನ | ಧಾಗೆತಿಟ ದಿನಗಿನ ದಿನಗಿನ |
ಧಾಗೆತಿಟ ದಿನಗಿನ | ಧಾತಿರಕಿಟತಕ ಧಾಗೆತಿಟ ತಿನಕಿನ |
ತಾಕೆತಿಟ ತಿನಕಿನ | ತಾಕೆತಿಟ ತಿನಕಿನ ತಿನಕಿನ |
ಧಾಗೆತಿಟ ದಿನಗಿನ | ಧಾತಿರಕಿಟತಕ ಧಾಗೆತಿಟ ದಿನಗಿನ |

ಪಲ್ಟಾ – ೩ [ ಪ್ರಕಾರ ]

ಧಾಗೆತಿಟ ದಿನಗಿನ | ಧಾಗೆತಿಟ ಧಾಗೆತಿಟ ದಿನಗಿನ |
ಧಾಗೆತಿಟ ದಿನಗಿನ | ಧಾಗೆತಿಟ ಧಾಗೆತಿಟ ದಿನಗಿನ |
ತಾಕೆತಿಟ ತಿನಕಿನ | ತಾಕೆತಿಟ ತಾಕೆತಿಟ ತಿನಕಿನ |
ಧಾಗೆತಿಟ ದಿನಗಿನ | ಧಾತಿರಕಿಟತಕ ಧಾಗೆತಿಟ ದಿನಗಿನ |

ಪಲ್ಟಾ – ೪ [ ಪ್ರಕಾರ ]

ಧಾಗೆತಿಟ ದಿನಗಿನ | ಧಾ - - ಧಾಗೆತಿಟ ದಿನಗಿನ |
ಧಾಗೆತಿಟ ದಿನಗಿನ | ಧಾಗೆತಿಟ ಧಾಗೆತಿಟ ದಿನಗಿನ |
ತಾಕೆತಿಟ ತಿನಕಿನ | ತಾ - - ತಾಕೆತಿಟ ತಿನಕಿನ |
ಧಾಗೆತಿಟ ದಿನಗಿನ | ಧಾತಿರಕಿಟತಕ ಧಾಗೆತಿಟ ದಿನಗಿನ |

ತಿಹಾಯಿ

ಧಾಗೆತಿಟ ದಿನಗಿನ | ಧಾತಿರಕಿಟತಕ ಧಾಗೆತಿಟ ತಿನಕಿನ ಧಾ - -
ಧಾಗೆತಿಟ ದಿನಗಿನ | ಧಾ - -
ಧಾಗೆತಿಟ ದಿನಗಿನ | ಧಿ.. ....

## ದೃತ್ ಏಕ್ ತಾಳದ ೪ ಮುಕಡಗಳು

ಪ್ರಕಾರ -೧

೧ ೨ | ೩ ೪ | ೫ ೬ | ೭ ೮ | ೯ ೧೦ | ೧೧ ೧೨ |

ದಿನ್ ದಿನ್| ಧಾ ತಿಟ| ತೋ ನ | ತಾತಿಟ ಧಾತಿಟ ತಾತಿಟ ಧಾತಿಟ |

x |೦ |೨ |೦ |೩ |೪ |

ಪ್ರಕಾರ -೨

ದಿನ್ ದಿನ್ | ಧಾ ತಿಟ | ತೋ ನ | ತಿರಕಿಟ ತಕತಾ ತಿರಕಿಟ ಧಾತಿ ಧಾತಿ |

ಪ್ರಕಾರ – ೩

ದಿನ್ ದಿನ್ | ಧಾ ತಿಟ | ತೋ ನ | ತಿರಕಿಟ ತಕತಾ ತಿರಕಿಟ ಧಾತಿರಕಿಟ ಧಾತಿರಕಿಟ |

ಪ್ರಕಾರ - ೪

ದಿನ್ ದಿನ್ | ಧಾ ತಿಟ | ತೋ ನ | ಧಾಧಾತಿಟ ಧಾಧಾತಿಟ ಧಾಧಾತಿಟ |

## ಝಪ್ತಾಳದ ೨ ತಿಹಾಯಿಗಳು

ಪ್ರಕಾರ - ೧

ಧಾತಿಧಾಗೆ ತಿನಕಿನ ಧಾತಿ ಧಾ - - |<br>
ಧಾತಿಧಾಗೆ ತಿನಕಿನ ಧಾತಿ ಧಾ - - |<br>
ಧಾತಿಧಾಗೆ ತಿನಕಿನ ಧಾತಿ ಧಾ ......

x

ಪ್ರಕಾರ - ೨

ತಿಟಕತ ಗದಿಗನ ಧಾತಿ ಧಾ - - |<br>
ತಿಟಕತ ಗದಿಗನ ಧಾತಿ ಧಾ - - |<br>
ತಿಟಕತ ಗದಿಗನ ಧಾತಿ ಧಾ .. ....

x

## ಝಪ್ತಾಳದ ೪ ಮುಕಡಾಗಳು

### ಪ್ರಕಾರ - ೧

| | | | |
|---|---|---|---|
| ೧ ೨ | ೩ ೪ ೫ | ೬ ೭ | ೮ ೯ ೧೦ |
| ಧಿ ನ | ಧಿ ಧಿ ನ | ತಾತಾತಿಟ | ಧಾ-ತಿಟ ಧಾ-ತಿಟ |
| x | ೨ | ೦ | ೩ |

### ಪ್ರಕಾರ - ೨

| | | | |
|---|---|---|---|
| ೧ ೨ | ೩ ೪ ೫ | ೬ ೭ | ೮ ೯ ೧೦ |
| ಧಿ ನ | ಧಿ ಧಿ ನ | ತಿನ್ನಾತಿಟ | ಧಾ-ಗಿನ ಧಾ-ತಿಟ |
| x | ೨ | ೦ | ೩ |

### ಪ್ರಕಾರ - ೩

| | | | |
|---|---|---|---|
| ೧ ೨ | ೩ ೪ ೫ | ೬ ೭ | ೮ ೯ ೧೦ |
| ಧಿ ನ | ಧಿ ಧಿ ನ | ತತ ತತ | ಧಧದ ಧಧಧ |
| x | ೨ | ೦ | ೩ |

### ಪ್ರಕಾರ -೪

| | | | |
|---|---|---|---|
| ೧ ೨ | ೩ ೪ ೫ | ೬ ೭ | ೮ ೯ ೧೦ |
| ಧಿ ನ | ಧಿ ಧಿ ನ | ತಿನ್ನಾ ತಿರಕಿಟ | ಧಾತಿರಕಿಟ ಧಾತಿರಕಿಟ |
| x | ೨ | ೦ | ೩ |

## ತೀನ್ ತಾಳದ ೪ ಪೇಶ್ಕಾರಗಳು

ಪ್ರಕಾರ - ೧

ಧೀಕ್ಡ್ ದಿಂದಾ -ಧಾದಿಂದಾ | ಧಾತಿಧಾತಿ ಧಾಧಾತಿಂತಾ |
ತೀಕ್ಡ್ ತಿಂತಾ - ತಾತಿಂತಾ | ಧಾತಿಧಾತಿ ಧಾಧಾಧಿಂದಾ |

ಪ್ರಕಾರ - ೨

ಧೀಕ್ಡ್ ದಿಂದಾ -ಧಾದಿಂದಾ | ಧೀಕ್ಡ್ ದಿಂದಾ -ಧಾದಿಂದಾ |
ಧೀಕ್ಡ್ ದಿಂದಾ -ಧಾದಿಂದಾ | ಧಾತಿಧಾತಿ ಧಾಧಾತಿಂತಾ |
ತೀಕ್ಡ್ ತಿಂತಾ - ತಾತಿಂತಾ | ತೀಕ್ಡ್ ತಿಂತಾ -ತಾತಿಂತಾ |
ಧೀಕ್ಡ್ ದಿಂದಾ -ಧಾದಿಂದಾ | ಧಾತಿಧಾತಿ ಧಾಧಾಧಿಂದಾ |

ಪ್ರಕಾರ - ೩

ಧೀಕ್ಡ್ ದಿಂದಾ ಧೀಕ್ಡ್ ದಿಂದಾ | ಧೀಕ್ಡ್ ದಿಂದಾ -ಧಾದಿಂದಾ |
ಧೀಕ್ಡ್ ದಿಂದಾ - ಧಾದಿಂದಾ | ಧಾತಿಧಾತಿ ಧಾಧಾತಿಂತಾ |
ತೀಕ್ಡ್ ತಿಂತಾ ತೀಕ್ಡ್ ತಿಂತಾ | ತೀಕ್ಡ್ ತಿಂತಾ - ತಾತಿಂತಾ |
ಧೀಕ್ಡ್ ದಿಂದಾ - ಧಾದಿಂದಾ | ಧಾತಿಧಾತಿ ಧಾಧಾಧಿಂದಾ |

ಪ್ರಕಾರ -೪

ಧೀಕ್ಡ್ ದಿಂದಾ -ಧಾದಿಂದಾ | -ಧಾದಿಂದಾ -ಧಾದಿಂದಾ |
ಧೀಕ್ಡ್ ದಿಂದಾ - ಧಾದಿಂದಾ | ಧಾತಿಧಾತಿ ಧಾಧಾತಿಂತಾ |
ತೀಕ್ಡ್ ತಿಂತಾ - ತಾತಿಂತಾ | - ತಾತಿಂತಾ - ತಾತಿಂತಾ |

ತಿಹಾಯಿ

ಧಾತಿಧಾತಿ ಧಾಧಾತಿಂತಾ ದಾ -
ಧಾತಿಧಾತಿ ಧಾಧಾತಿಂತಾ ದಾ -
ಧಾತಿಧಾತಿ ಧಾಧಾತಿಂತಾ ದಾ ....

# ಶಾಸ್ತ್ರ ಪರಿಚಯ [ ಥೇರಿ ]

## ಪಾರಿಭಾಷಿಕ ಶಬ್ದಗಳು

೧] ಬೋಲ್ ೨] ತಿಹಾಯಿ ೩] ಮುಖಡಾ ೪] ಕಾಯ್ದ ೫] ಸಮ್ ೬] ಸಂಗೀತ, ೭] ನಾದ

೧] ಬೋಲ್ : ತಬಲಾ ಅಥವಾ ಪಖವಾಜದ ಮೇಲೆ ನುಡಿಸುವಂತ ಅಕ್ಷರಗಳಿಗೆ ಬೋಲ್ ಎನ್ನುತ್ತಾರೆ.

೨] ತಿಹಾಯಿ : ಒಂದು ಚಿಕ್ಕದಾದ ತಬಲಾ ಶಬ್ದಗಳ ಸಮೂಹವನ್ನು ಮೂರು ಸಲ ಬಾರಿಸಿ ಸಮ್ಮಿಗೆ ಬರುವ ಕ್ರಿಯೆಗೆ ತಿಹಾಯಿ ಎನ್ನುತ್ತಾರೆ.

೩] ಮುಖಡಾ : ತಾಳ ಅಂಗಗಳ ಆಧಾರದ ಮೇಲಿಂದ ರಚಿಸಲ್ಪಟ್ಟ ಒಂದು ಚಿಕ್ಕದಾದ ತಬಲಾ ಬೋಲ್ ಗಳ ಸಮೂಹಕ್ಕೆ ಮುಖಡಾ ಎಂದು ಹೆಸರು. ಇದು ವಿಶೇಷವಾಗಿ ತಾಳದ ಅರ್ಧ ಭಾಗದಲ್ಲಿದ್ದು ತಬಲಾ ಸಾಥಿಗೆ ಉಪಯೋಗಿಸುತ್ತಾರೆ.

೪] ಕಾಯ್ದ : ಪಧ್ದತಿಗೆ ಅನುಸಾರವಾಗಿ ನಿರ್ಧಿಷ್ಟ ಮಾತ್ರಗಳಲ್ಲಿ ರಚಿಸಲ್ಪಟ್ಟ ವಿಸ್ತಾರ ಪ್ರಧಾನವಾದ ತಬಲಾ ಶಬ್ದಗಳಿಗೆ ಕಾಯ್ದ ಎನ್ನುತ್ತಾರೆ.

೫] ಸಮ್ : ಮೊದಲ ಮಾತ್ರಕ್ಕೆ ಸಮ್ ಎನ್ನುತ್ತಾರೆ.

೬] ಸಂಗೀತ : ಗಾಯನ , ವಾದನ , ನರ್ತನ ಈ ಮೂರರ ಸಮ್ಮಿಲನಕ್ಕೆ ಅಥವಾ ಸಮೂಹಕ್ಕೆ ಸಂಗೀತ ಎಂದು ಕರೆಯುತ್ತಾರೆ.

೭] ನಾದ : ಕಿವಿಗೆ ಇಂಪಾಗಿ ಕೇಳುವ ಕಂಪನಯುಕ್ತವಾದ ಸಂಗೀತ ಉಪಯೋಗ ಧ್ವನಿಗೆ ನಾದ ಎಂದು ಕರೆಯುತ್ತಾರೆ.

# ಕರ್ನಾಟಕಿ ಮತ್ತು ಹಿಂದೂಸ್ತಾನಿ ತಾಲ ಪದ್ಧತಿಯ ತುಲನಾತ್ಮಕ ಮಾಹಿತಿ

ಕರ್ನಾಟಕಿ ಮತ್ತು ಹಿಂದೂಸ್ತಾನಿ ತಾಲ ತುಲನಾ ಕಾರ್ಯವು ಸೂಕ್ಷ್ಮವಾಗಿದೆ. ತಾಳವೆಂದರೆ ಎಲ್ಲಾ ವಿಧದ ಸಂಗೀತಕ್ಕೂ ಒಂದೇ ತೆರನಾಗಿರುತ್ತದೆ. ಆದರೆ ಬಾರಿಸುವ ವಿಧಾನಗಳ ಬೇರೆ – ಬೇರೆಯಾಗಿರುತ್ತದೆ. ಕರ್ನಾಟಕಿ ಸಂಗೀತಕ್ಕೆ ಮೃದಂಗವನ್ನು ಉಪಯೋಗಿಸುತ್ತಾರೆ. ಹಿಂದೂಸ್ತಾನಿ ಸಂಗೀತಕ್ಕೆ ತಬಲ ಉಪಯೋಗಿಸುತ್ತಾರೆ. ಮೃದಂಗದ ಬಲಭಾಗವು ಚಿಕ್ಕದಾಗಿದ್ದು ಎಡಭಾಗವು ಅಗಲವಾಗಿರುತ್ತದೆ. ಬಲಗಡಿಗೆ ಉತ್ತಮ ಕರ್ಣಿ ಹಾಕಿದ್ದರೆ ಎಡಗಡೆ ಮುಚ್ಚಿಗೆಗೆ ಗೋದಿಹಿಟ್ಟು ನೆನೆ ಇಟ್ಟ ಕಣಕವನ್ನು ಹಚ್ಚುತ್ತಾರೆ, ಒಂದು ಬಟ್ಟಲು ನೀರು ಇಟ್ಟುಕೊಂಡಿರುತ್ತಾರೆ. ಕಛೇರಿ ನೆಡೆದಾಗ ಕಣಕ ಉದರಿ ಕಡಿಮೆಯಾದಂತೆಲ್ಲಾ ಪುನಃ ನೀರು ಹಚ್ಚುತ್ತ ಕಣಕ ಹಚ್ಚುತ್ತ ಹೋಗುತ್ತಾರೆ.ಇದರಿಂದ ಮಧುರತೆ ಹೆಚ್ಚಾಗುತ್ತ ಹೋಗುತ್ತದೆ. ವಾದನಕಾರರು ಮೃದಂಗ ವಾದನದಲ್ಲಿ ತನ್ಮಯನಾಗಿ ತನ್ನ ಕಲಾ ನೇಪುಣ್ಯತೆ ಯನ್ನು ಪ್ರದರ್ಶಿಸುತ್ತಾನೆ ಹೀಗೆ ಮೃದಂಗದ ವಿಧಾನವಾಗಿದೆ.

ಮೂಲಥಾ ಹುಟ್ಟಿದ ಏಳು ತಾಳಗಳ ಕರ್ನಾಟಕಿಯಲ್ಲೇ ಇವೆ. ಅವು ಯಾವವು ಎಂದರೆ ಧ್ರುವತಾಳ, ಮಠ್ಯತಾಳ, ರೂಪತಾಳ, ಝುಂಪತಾಳ, ತ್ರಿಪುಟತಾಳ ಅಟ್ಟತಾಳ, ಏಕತಾಳ,ಈ ತಾಳಗಳಿಗೆ ೫ ಜಾತಿ ಹು=ಟ್ಟಿದವು ಅವು ಯಾವವು ಎಂದರೆ ಚತುಶ್ರ, ತಿಶ್ರ, ಮಿಶ್ರ,ಖಂಡ, ಸಂಕೀರ್ಣ. ಈ ಜಾತಿಯ ಆಧಾರದ ಮೇಲೆಯೇ ಕರ್ನಾಟಕಿಯಲ್ಲಿ ತಾಳಗಳನ್ನು ಗತಿಕಟ್ಟಿ ಬಾರಿಸುತ್ತಾರೆ ಈ ಏಳು ತಾಳಗಳಿಗೆ ೫ ಜಾತಿಯಿಂದ ಗುಣಿಸಿ ೭*೫ =೩೫ ತಾಳಗಳನ್ನು ಮಾಡಿದ್ದಾರೆ. ಕರ್ನಾಟಕಿಯಲ್ಲಿ ಜಾತಿಯ ಆಧಾರದ ಮೇಲೆಯೇ ತಾಳಗಳನ್ನು ಬಾರಿಸುತ್ತಾರೆ. ಹಿಂದುಸ್ತಾನಿ ಜಾತಿಯ ಆಧಾರದ ಮೇಲೆ ಬಾರಿಸುವುದಿಲ್ಲ. ನಿರ್ದಿಷ್ಟಪಡಿಸಿದ ತಾಳಗಳನ್ನು ಬಾರಿಸುತ್ತಾರೆ. ಜಾತಿಯ ಬದಲು ಭಾಗ ಅಥವಾ ಖಂಡವೆಂದು ಕರೆಯುತ್ತಾರೆ.

ಈ ೭ ತಾಳಗಳಿಂದಲೇ ಹಿಂದುಸ್ತಾನಿ ತಾಳಗಳು ಹುಟ್ಟಿದವು ಅವುಗಳ ವಿವರ ಕೆಳಗಿನಂತಿದೆ.

| ಸಂಖ್ಯೆ | ಮಾತ್ರಗಳು | ಮೂಲ ತಾಳಗಳು | ಅಂಗ ಸ್ವರೂಪ | ಹಿಂದುಸ್ತಾನಿ ತಾಳಗಳು | ಭಾಗ ಲಕ್ಷಣ |
|---|---|---|---|---|---|
| ೧ | ೧೪ | ಧ್ರುವತಾಳ | \|O\|\| | ಧಮಾರ್ ತಾಳ | ೫-೨-೩-೪ |
| ೨ | ೧೦ | ಮಠ್ಯತಾಳ | \|O\| | ಸೂಲತಾಳ | ೨-೨-೨-೨-೨-೨ |
| ೩ | ೬ | ರೂಪತಾಳ | O\| | ದಾದರ | ೩-೩ |
| ೪ | ೭ | ಝಂಪತಾಳ | \|OO | ರೂಪಕ | ೩-೨-೨ |
| ೫ | ೮ | ತ್ರಿಪುಟತಾಳ | \|OO | ತೀನತಾಳ | ೪-೪-೪-೪ |
| | | | ( ಮಾತ್ರ- ೧೬) | | |
| ೬ | ೧೨ | ಅಟ್ಟತಾಳ | \|OO | ಚೌತಾಳ | ೨-೨-೨-೨-೨-೨ |
| ೭ | ೪ | ಏಕತಾಳ | \| | ಕಹರವಾ | ೨-೨ |

ಈ ರೀತಿಯಾಗಿ ಕರ್ನಾಟಕಿಯಿಂದ ಹಿಂದುಸ್ತಾನಿ ತಾಳಗಳು ಉತ್ಪತ್ತಿಯಾದವು. ಕರ್ನಾಟಕಿ ಪದ್ಧತಿಯಲ್ಲಿ ಅಂಗಸ್ವರೂಪವೆಂದು ಕರೆದರೆ, ಹಿಂದೂಸ್ತಾನಿ ತಾಳಗಳಲ್ಲಿ ಭಾಗ ಅಥವಾ ವಿಭಾಗ ( ಖಂಡ ) ಎಂದು ಕರೆಯುತ್ತಾರೆ.ಕರ್ನಾಟಕಿ ಪದ್ಧತಿಯಲ್ಲಿ ಎಲ್ಲಾ ಅಂಗಗಳಿಗೂ ಪೆಟ್ಟುಗಳಿರುತ್ತವೆ. ಹಿಂದೂಸ್ತಾನಿಯಲ್ಲಿ ಪೆಟ್ಟಿನ ಭಾಗ ಮತ್ತು ಹುಸಿ ಭಾಗ ಕೂಡಾ ಇರುತ್ತದೆ.ಕರ್ನಾಟಕಿಯಲ್ಲಿ ೧ ಮಾತ್ರಯ ಭಾಗ ಇರುತ್ತದೆ. ಹಿಂದುಸ್ತಾನಿಯಲ್ಲಿ ೧ ಮಾತ್ರಕ್ಕೆ ಭಾಗ ಇರುವುದಿಲ್ಲ. ಹಿಂದುಸ್ತಾನಿಯಲ್ಲಿ ತಬಲ ಮತ್ತು ಡಗ್ಗಾಗಳಿಂದ ತಾಳಗಳನ್ನು ಬಾರಿಸುತ್ತಾರೆ.ಹಿಂದುಸ್ತಾನಿಯಲ್ಲಿಹಾಡುಗಾರರು ತಾಳವನ್ನು ತಮ್ಮ ಕೈಯಲ್ಲಿ ಹಾಕುತ್ತಾರೆ.ವಾದ್ಯಗಾರರಿದ್ದರೆ ಕಾಲಲ್ಲಿತಾಳವನ್ನು ಹಾಕುತ್ತ ಬಾರಿಸುತ್ತಾರೆ

ತಾಳವನ್ನುತಮ್ಮ ಸ್ವಂತ ಆಧೀನದಲ್ಲಿಟ್ಟು ಕೊಂಡಿರುತ್ತಾರೆ. ಹಿಂದುಸ್ತಾನಿಯ ಪದ್ಧತಿಯಲ್ಲಿ ತಾಳವನ್ನು ತಾಳವು ಹೆಚ್ಚಾಗಿ ತಬಲ ವಾದಕನ ಮೇಲೆ ಆವಲಂಬಿತವಾಗಿರುತ್ತದೆ. ಕಾರಣ ತಬಲವಾದಕನು ಸಮರ್ಥನಾಗಿರಬೇಕೆನ್ನುವದು ಸೂಚಿಸುತ್ತದೆ. ಗಾಯಕನು ಯಾವ ಗತಿಯಲ್ಲಿ ಹಾಡುತ್ತಾನೆನ್ನುವುದು ಅವನ ಬಿಲಂಪದ ತೂಕದ ಮೇಲೆ ತಿಳಿದುಕೊಂಡು ಸಮ್ ಕೊಟ್ಟು ಪ್ರಾರಂಭ ಮಾಡಬೇಕಾಗುತ್ತದೆ ಕರ್ನಾಟಕಿಯಲ್ಲಿ ಕೈಯಲ್ಲಿ ತಾಳ ಹಾಕಿ ತೋರಿಸುವುದರಿಂದ ಈ ಸಮಸ್ಯೆ ಇರುವುದಿಲ್ಲ ಹಿಂದುಸ್ತಾನಿ ಪದ್ಧತಿಯಲ್ಲಿ ತಾಳದ ಅಪಾರ ಜಾನ ಹೊಂದಿರಬೇಕು.ಕೆಲವೊಮ್ಮೆ ಮಾತ್ರೆಗಳ ಚಲನೆಗೊತ್ತಾಗದೆ ಸುಮ್ಮನೆ ಕೂಡುವ ಪ್ರಸಂಗ ಬರುವ ಸಾಧ್ಯತೆ ಉಂಟು. ಸಾತ್-ಸಂಗತ್ ಮಾಡಿದ ಸಾಕಷ್ಟು ಅನುಭವವಿದ್ದರೆ ತಾಳದ  ಗೊತ್ತಾಗುತ್ತದೆ. ಹಿಂದುಸ್ತಾನಿಯಲ್ಲಿ ಅತೀ ವಿಲಂಬಿತ್ ನುಡಿಸುವುದಕ್ಕೆ ಬಹಳ ಪ್ರಾಧಾನ್ಯತೆ ಇದೆ.ಆಗ ತಾಳದ ಸಂಪೂರ್ಣ ಹೊಣೆಗಾರಿಕೆಯನ್ನು ತಬಲವಾದಕನ ಮೇಲೆ ಇರುತ್ತದೆ.

ದಕ್ಷಿಣಾದಿಯಲ್ಲಿ ಹಾಡುವಾಗ ಮದ್ಯದಲ್ಲಿ ಮೃದಂಗವಾದಕನಿಗೆ ಸಮಯ ಕೊಟ್ಟು ತಾವು ತಾಳ ಹಾಕುತ್ತ ಕೂಡುತ್ತಾರೆ. ಮೃದಂಗವಾದಕನು ಎಲ್ಲ ಲಯಕಾರಿಯ ಬೋಲಗಳನ್ನು ೧೦-೧೫ ನಿಮಿಷದವರಿಗೆ ಬಾರಿಸಿ ಜನರನ್ನು ರಂಜಿಸುತ್ತಾನೆ. ಆದರೆ ಹಿಂದುಸ್ತಾನಿಯಲ್ಲಿ ತಬಲವಾದಕನಿಗೆ ತಮ್ಮ ಗಾಯನದಲ್ಲಿ ಸಮಯವನ್ನು ಬಿಟ್ಟು ಕೊಡುದಿಲ್ಲ ವಾದ್ಯಗಳ ಜತೆ ಬಾರಿಸುವಾಗ ಸಮಯವನ್ನು ಬಿಟ್ಟುಕೊಡುತ್ತಾರೆ. ಆಗ ತಬಲವಾದಕನು ತನ್ನ ಕಲಾ ಕೌಶಲ್ಯತೆಯನ್ನು ತೊರಿಸುತ್ತಾರೆ.

# ಚಿಹ್ನೆಗಳ ಬಗ್ಗೆ ಮಾಹಿತಿ

ಪಂಡಿತ ಶ್ರೀ ವಿಷ್ಣು ನಾರಾಯಣ ಭಾತಖಂಡೆ ಪದ್ಧತಿಯ ಚಿಹ್ನೆಗಳು

**x** ಇದು ಸಮ್ ಸೂಚಿಸುವ ಗುರುತು

ಉದಾ: ಧಾ ಧಿ ನಾ ಧಾ ತೊ ನಾ

*

O ಇದು ಹುಸಿ ಸೂಚಿಸುವ ಗುರುತು

ಉದಾ: ಧಾ ಧಿ ನಾ ಧಾ ತೊ ನಾ

O

_ ಇದು ಪೆಟ್ಟು ಸೂಚಿಸುವ ಗುರುತು

ಉದಾ: ಧಿ ನಾ ಧಿ ಧಿ ನಾ ತಿ ನಾ ಧಿ ಧಿ ನಾ

| ಇದು ಭಾಗ ಸೂಚಿಸುವ ಗುರುತು

ಉದಾ: ಧಾ ಧಿ ನಾ | ಧಾ ತೊ ನಾ

ಅರ್ಧಚಂದ್ರ ಇದು ಮಾತ್ರ ಸೂಚಿಸುವ ಗುರುತು

ಉದಾ: ಧಾ ಧಿ ನಾ | ಧಾ ತೊ ನಾ

ಈ ಪದ್ಧತಿಯಲ್ಲಿ ಹೆಚ್ಚು ಅಕ್ಷರಗಳು ಬಂದರು ಒಂದೇ ಮಾತ್ರದಲ್ಲಿ ಬರೆಯುತ್ತಾರೆ.

ಉದಾ: ೧ ಧಾಧಿ ನಾಧಾ ತೊನಾ

ಉದಾ: ೨ ಧಾಧಿನಾ ಧಾತೊನಾ

ಉದಾ: ೩ ತಿರಕಿಟ ಧಿರಧಿರ ಈ ರೀತಿ ಇತ್ಯಾದಿಯಾಗಿ ಬರೆಯುತ್ತಾರೆ.

ಪಂಡಿತ ಶ್ರೀ ದಿಗಂಬರ ಪುಲಷ್ಕರ ಪದ್ದತಿಯ ಚಿಹ್ನೆಗಳು

**x** : ಇದು ಸಮ್ ಗುರುತು.

೦ : ಇದು ಹುಸಿ ಗುರುತು.

೨ : ಇದು ಪೆಟ್ಟಿನ ಗುರುತು, ಈ ಪದ್ಧತಿಯಲ್ಲಿ ಚಿಹ್ನೆ ಸಮ್ ಗುರುತು ಹಾಕಿ ಮುಂದೆ ಅಂಕಿಗಳನ್ನು ಹಾಕುತ್ತ ಹೋಗುವುದಕ್ಕೆ ಪೆಟ್ಟು ಎಂದು ತಿಳಿದುಕೊಳ್ಳಬೇಕು.

| | | | | | | | | | | |
|---|---|---|---|---|---|---|---|---|---|---|
| ಠೇಕಾ - | ಧಾ | ಧಿ | ಧಿ | ಧಾ | \| | ಧಾ | ಧಿ | ಧಿ | ಧಾ | \| |
| ಚಿಹ್ನೆ - | x | | | | \| | ೨ | | | | \| |
| ಮಾತ್ರ - | ೯ | ೧೦ | ೧೧ | ೧೨ | \| | ೧೩ | ೧೪ | ೧೫ | ೧೬ | \| |
| ಠೇಕಾ - | ಧಾ | ತಿ | ತಿ | ಧಾ | \| | ತಾ | ಧಿ | ಧಿ | ಧಾ | \| |
| | ೦ | | | | | ೩ | | | | |

\- : ಇದು ಅರ್ಧ ಮಾತ್ರ ಸೂಚಿಸುವ ಗುರುತು

ಉದಾ : ಧಾ ಗೆ

೦ ೦

ಅರ್ಧಚಂದ್ರ ಕಾಲು ಮಾತ್ರದ ಸೂಚಿಸುವ ಗುರುತು.

ಉದಾ: ತಿ ರ ಕಿ ಟ

~ : ಇದು ಒಂದು ಮೂರಾಂಶ ಮಾತ್ರಯ ಗುರುತು.

## ತಬಲಾ ಕಲಾವಿದರ ಜೀವನ ಚರಿತ್ರೆ.

೧] ಪಂಡಿತ್ ಕಂಠೆ ಮಹರಾಜ್ ೨] ಹಬೀಬದ್ದೀನ್ ಖಾನ್

## ಪಂಡಿತ್ ಕಂಠೆ ಮಹಾರಾಜ್

ವಾರಣಾಸಿಯ ಸುಪ್ರಸಿದ್ದ ತಬಲಾ ಪಂಡಿತ ಕಂಠೆ ಮಹಾರಾಜ್ ಅವರ ಜನ್ಮವು ಸುಮಾರು ೧೮೮೪ ರಲ್ಲಿ ವಾರಣಾಸಿಯಲ್ಲಿಯಾಯಿತು. ಅವರ ತಂದೆ ಶ್ರೀ ದಿಲೀಪ ಮಹಾರಾಜ್ ಒಳ್ಳೆಯ ತಬಲಾ ವಾದಕರಾಗಿದ್ದರು . ಕಂಠೆ ಮಹಾರಾಜರು ಏಳು ವರ್ಷದ ಬಾಲಕರಿದ್ದಾಗ ಅವರ ತಂದೆ ಅವರನ್ನು ಪಂಡಿತ ಬಲದೇವ ಸಹಾಯ ಅವರ ಹತ್ತಿರ ತಬಲಾ ಶಿಕ್ಷಣ ಕೊಡಿಸಲು ಆರಂಭಿಸಿದರು. ಅವರು ಬಹಳ ದೀರ್ಘ ಕಾಲದವರಿಗು ತಬಲಾ ಶಿಕ್ಷಣವನ್ನು ಅಭ್ಯಾಸ ಮಾಡಿದರು. ಕಂಠೆ ಮಹಾರಾಜ ಅವರಿಗೆ ಇರ್ವರು ಅಣ್ಣತಮ್ಮಂದಿರು ಇದ್ದರು. ಅವರಲ್ಲಿ ದೊಡ್ಡ ಅಣ್ಣ ಶ್ರೀ ಮಾದೋಪ್ರಸಾದ ಸಣ್ಣ ತಮ್ಮ ಶ್ರೀ ಹರಿಪ್ರಸಾದ್ ಇರ್ವರು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಅಸುನೀಗಿದರು.

ಕಂಠೆ ಮಹಾರಾಜ ಅವರ ಪತ್ನಿಯು ಬಹು ಬೇಗನೆ ಸ್ವರ್ಗವಾಸಿಯಾದರು.ಪಂಡಿತ ಅವರು ಮರುವಿವಾಹ ಆಗಲಿಲ್ಲ.ತಮ್ಮನ ಮಗನಾದ ಪಂಡಿತ ಕಿಶನ್ ಮಹರಾಜನನ್ನೇ ದತ್ತು ಪುತ್ರನೆಂದು ಸ್ವೀಕರಿಸಿ , ಆತನಿಗೆ ತಬಲಾ ಶಿಕ್ಷಣವನ್ನು ಕೊಟ್ಟರು. ಕಂಠೆ ಮಹಾರಾಜ ಬಹಳ ಧಾರ್ಮಿಕ ಪ್ರವೃತ್ತಿಯವರಾಗಿದ್ದರು.ಪಂಡಿತ ಅವರಿಗೆ ಭಾರತದ ಶ್ರೇಷ್ಠ ಸಂಗೀತ ಸಭೆಗಳಲ್ಲಿ ಹಾಗೂ ಆಕಾಶವಾಣಿಯಲ್ಲಿ ಅವಕಾಶ ದೊರಕಿತಲ್ಲದೆ, ದೇಶದ ರಾಷ್ಟ್ರಪತಿಯವರಿಂದ ಸನ್ಮಾನ ಸಿಕ್ಕಿತು.

ಇವರ ಶಿಷ್ಯರಲ್ಲಿ ಸರ್ವಶ್ರೀ ಕಿಶನ ಮಹಾರಾಜ, ಶಾರದ ಸಹಾಯ, ಅಶುತೊಷ ಭಟ್ಟಾಚಾರ್ಯ ಮುಂತಾದವರು ಉಲ್ಲೇಖನೀಯರಾಗಿದ್ದಾರೆ.

## ಹಬೀಬುದ್ದೀನ್ ಖಾನ್

ಉಸ್ತಾದ್ ಹಬಿಬುದ್ದೀನ್ ಖಾನ್ ಅವರು ಒಬ್ಬ ಶ್ರೇಷ್ಟ ತಬಲಾವಾದಕರಾಗಿದ್ದರು. ೧೮೯೯ ರಲ್ಲಿ ಮೀರತ್ ದಲ್ಲಿ ಜನಿಸಿದರು. ಇವರ ತಂದೆ ಉಸ್ತಾದ್ ಶಮ್ಮು ಖಾನ್ ಸಹ ಪ್ರಸಿದ್ದ ತಬಲಾವಾದಕರಾಗಿದ್ದರು. ಅತೀ ಚಿಕ್ಕ ವಯಸಿನಲ್ಲಿಯೇ ತಬಲಾ ಶಿಕ್ಷಣವನ್ನು ತಮ್ಮ ತಮ್ಮಂದಿರ ಹತ್ತಿರ ಪ್ರಾರಂಭಮಾಡಿ ಸುಮಾರು ೧೨ ವರ್ಷ ಅಭ್ಯಾಸ ಮಾಡಿ ನಂತರ ದಿಲ್ಲಿಯ ನತ್ತುಖಾನ್ ಅವರ ಹತ್ತಿರ ತಮ್ಮ ಶಿಕ್ಷಣವನ್ನು ಮುಂದುವರಿಸಿದರು. ಇವರು ಅಜರಡಾ ಮತ್ತು ದಿಲ್ಲಿ ಘರಣೆ ವಾದನ ಶೈಲಿಯಲ್ಲಿ ಪರಿಣಿತರಿದ್ದರು. ಅಲ್ಲದೆ ಬೇರೆ ಘರಣೆಯವಾದನದಲ್ಲೂ ಪರಿಶ್ರಮವಿತ್ತು. ಇವರು ಭಾರತದ ಶ್ರೇಷ್ಟ ಸಂಗೀತ ಸಭೆಗಳಲ್ಲಿ ತಮ್ಮ ವಾದನವನ್ನು ಪ್ರಸ್ತುತ ಪಡಿಸಿದಲ್ಲದೆ ಲಖನೌ ಸಂಗೀತ ಸಭೆಗಳಲ್ಲಿ ಇವರಿಗೆ 'ಸಂಗೀತ ಸಾಮ್ರಾಟ' ಎಂಬ ಪದವಿಯನ್ನು ಕೊಟ್ಟು ಸನ್ಮಾನಿಸಲಾಗಿತ್ತು. ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಕೂಡ ಇವರಿಗೆ ದೊರಕಿತು. ಇವರು ೨೦ ಜುಲೈ ೧೯೭೨ ರಲ್ಲಿ ಸ್ವರ್ಗಸ್ಥರಾದರು.

# ವಿಲಂಬಿತ್ ತೀನ್ ತಾಲ್ ಪರಿಚಯ

ಮಾತ್ರ : ೧೬

ಭಾಗ : ೪ (೪, ೪, ೪, ೪ ) ರಂತೆ

ಪೆಟ್ಟು : ೩

೧ , ೫, ೧೩ ನೇ ಮಾತ್ರಗಳ ಮೇಲೆ ಪೆಟ್ಟು

ಹುಸಿ : ೧

೯ ನೇ ಮಾತ್ರದ ಮೇಲೆ ಹುಸಿ

| | | | | | | | |
|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ |
| ದಾತಿಟ | ಧಿನ್ | ಧಿನಧಿನ್ | ಧಾ | ದಾತಿಟ | ಧಿನ್ | ಧಿನಧಿನ್ | ಧಾ |
| x | | | | ೨ | | | |
| ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ |
| ದಾಗಿಗಿ | ತಿನ್ | ತಿನತಿನ್ | ತಾ | ತಾತಿರಕಿಟ | ಧಿನ್ | ಧಿನದಿನ್ | ಧಾಕತ್ |
| ೦ | | | | ೩ | | | |

ಈ ತಾಳವನ್ನು ತಬಲ ಸೋಲೋ ಕ್ಕೆ ಹಾಗೂ ಬೇರೆ ವಾದ್ಯಗಳು ಅಂದರೆ ಸಿತಾರ್ , ವಯೋಲಿನ್, ಶಹನಾಯಿ ವಾದ್ಯಗಳ ಜೊತೆ ಸಾತಿಯಾಗಿ ನುಡಿಸುತ್ತಾರೆ.

## ಝಪ್ತಾಲ್ ಪರಿಚಯ

**ಮಾತ್ರ : ೧೦**

**ಭಾಗ : ೪ ( ೨, ೩, ೨, ೩ ) ರಂತೆ**

**ಪೆಟ್ಟು : ೩**

**೧ , ೩ , ೮ ನೇ ಮಾತ್ರಗಳ ಮೇಲೆ ಪೆಟ್ಟು**

**ಹುಸಿ : ೧**

**೬ ನೇ ಮಾತ್ರದ ಮೇಲೆ ಹುಸಿ**

| | | | | | | | | | |
|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |
| ಧಿ | ನಾತಿಟ | ಧಿ | ಧಿ | ನಾತಿಟ | ತಿ | ನಾತಿಟ | ಧಿ | ಧಿ | ನಾತಿಟ |
| x | | ೨ | | | ೦ | | ೩ | | |

**ಈ ತಾಳವನ್ನು ತಬಲ ಸೋಲೋ ಕ್ಕೆ ಹಾಗೂ ಬೇರೆ ವಾದ್ಯಗಳು ಅಂದರೆ ಸಿತಾರ್ , ವಯೋಲಿನ್, ಶಹನಾಯಿ, ಬಾನ್ಸೂರಿ ( ಕೊಳಲು ) ವಾದ್ಯಗಳ ಜೊತೆ ಸಾತಿಯಾಗಿ ನುಡಿಸುತ್ತಾರೆ.**